ಕನ್ಸಲ್ಟೆಂಟ್ಸ್ ಇದ್ದಾರೆ. ಸರ್ಕಾರದ ಅಧಿಕೃತ ತಾಂತ್ರಿಕ ನಿರ್ದೇಶಕರಾದ ಟೆಕ್ಸಾಕ್ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆ, ಕರ್ನಾಟಕ ಕೈಗಾರಿಕೆಗಳ ಅಭಿವೃದ್ಧಿ ಮಂಡಳಿ, ಜಿಲ್ಲಾ ಕೈಗಾರಿಕಾ ಕೇಂದ್ರ ಇವೆಲ್ಲ ಇದ್ದರೂ ಕೂಡಾ ಇವರ ಒಂದು ಓಪೀನಿಯನ್‌ನನ್ನು ಅವರು ಕೇಳುತ್ತಾ ಇಲ್ಲ. ಪ್ರೈವೇಟ್‌ನಿಂದಲೇ ತೆಗೆದು ಕೊಂಡು ಬನ್ನಿ ಅಲ್ಲಿಂದಲೇ ತನ್ನಿ, ಇಲ್ಲಿಂದಲೇ ತನ್ನಿ ಎಂದು ಹೇಳುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ? ಬಾರದಿದ್ದರೆ, ನಿಮ್ಮ ಕೆ.ಎಸ್.ಎಫ್.ಸಿ. ಯಲ್ಲಿ ಪ್ರತಿಯೊಂದೂ ಬ್ರಾಂಚಿನಲ್ಲಿಯೂ ಇಂತಿಂತಹವರ ಕಡೆಗೆ ಹೋಗಿ ಎಂದು, ಒಬ್ಬೊಬ್ಬ ಕನ್ಸಲ್ಟೆಂಟ್‌ನ್ನು ಇಟ್ಟುಕೊಂಡಿದ್ದಾರೆ. ಆದುದರಿಂದ ನೀವು ಈ ರೀತಿಯಲ್ಲಿ ಕೇಳುವುದು ತಪ್ಪು ಎಂದು ಆ ಅಧಿಕಾರಿಗಳಿಗೆ ತಾವುಗಳು ಆದೇಶ ಕೊಡುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಯಾವುದೇ ಕೈಗಾರಿಕೆ ಪ್ರಾರಂಭ ಮಾಡತಕ್ಕಂತಹವರು ಕಾನೂನು ಪ್ರಕಾರ ಯಾರಿಂದ ಪ್ರಾಜೆಕ್ಟ್ ರಿಪೋರ್ಟ್‌ನ್ನು ಮಾಡಿಸಬೇಕೆಂದು ನಾವು ನಿರ್ದೇಶನ ಮಾಡುವುದಕ್ಕೆ ಬರುವುದಿಲ್ಲ. ಆಥವಾ ಕೆ.ಎಸ್.ಎಫ್.ಸಿ. ಯವರು ಅಕಸ್ಮಾತ್ತಾಗಿ ಏನಾದರೂ ಯಾವುದೇ ಆಸಕ್ತ ಸಂಸ್ಥೆಗೋಸ್ಕರ ಸಹಾಯ ಮಾಡುವುದಕ್ಕೋಸ್ಕರ ಹೇಳುತ್ತಾ ಇದ್ದರೆ ಅದು ಅಕ್ರಮವಾಗುತ್ತದೆ. ಅದನ್ನು ತಿದ್ದುತ್ತೇವೆ. ನಮ್ಮ ಸಂಸ್ಥೆಯಿಂದ ಕೈಗಾರಿಕೆಗೆ ಆರ್ಜಿ ಮಾಡುವ ವರಿಗೆಲ್ಲಾ ನಮ್ಮ ಹತ್ತಿರವೇ ಬಂದು ಅಡ್ವೈಸ್ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕಾಗುವುದಿಲ್ಲ, ಆರ್ಡರಿಯಾಗಿ ಹೇಳುವುದಕ್ಕೆ ಸಾಧ್ಯವೂ ಇಲ್ಲ. ಆದುದರಿಂದ ಕೈಗಾರಿಕೆಗಳ ಸಲಹೆಗಾರರ ಮೇಲೆ ನಿರ್ಭಂದ ಹಾಕುವುದಕ್ಕೆ ಕಾನೂನು ಪ್ರಕಾರ ಸಾಧ್ಯವಿಲ್ಲ. ಮತ್ತು ಸೂಕ್ತವೂ ಅಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ಕೇಳುತ್ತಾ ಇರುವುದು—ನೀವು ಅವರ ಫಂಡಮೆಂಟಲ್ ರೈಟ್ಸ್‌ಗೆ ಇನ್‌ಫ್ರಿಂಟ್‌ಮೆಂಟ್ ಮಾಡಿ ಎಂದು ನಾನು ಹೇಳುತ್ತಾ ಇಲ್ಲ. ಅವರು ಬೇಕಾದಷ್ಟು ಹೋಗಬಹುದು, ಬೋರ್ಡ್ ಹಾಕಿಕೊಳ್ಳಬಹುದು ಅದಕ್ಕೆ ನಮ್ಮ ಅಡ್ಡಿಯಿಲ್ಲ. ನಮಗೆ ಸರಕಾರದ ವತಿಯಿಂದ ಇರುವ ಕನ್ಸಲ್ಟೆಂಟ್ ಮೂಲಕ ಸಲಹೆ ಸಿಕ್ಕಿದರೆ ಸಾಕು ನಮ್ಮನ್ನು ಪ್ರೈವೇಟ್ ಕನ್ಸಲ್ಟೆಂಟ್ಸ್ ಕಡೆಗೆ ಕಳುಹಿಸುವುದನ್ನು ತಪ್ಪಿಸಿದರೆ ಸಾಕು. ಅದಕ್ಕೆ ಸರಕಾರದವರ ಒಂದು ಆರ್ಡರ್ ಆದರೆ ಸಾಕು. ಇದರಿಂದಾಗಿ ನಮಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಜೆ. ಎಚ್. ಪಟೇಲ್.—ಇದು ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಸವದತ್ತಿ ನಗರದಲ್ಲಿ ಮುನ್ಸಿಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯ ಕಟ್ಟಡದ ಬಗ್ಗೆ

೨೫೧ (೭೨೪) ಶ್ರೀ ಎಂ. ಚಂದ್ರಶೇಖರ ಮಾವಿನ (ಪರಸಗಡ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ದಯವಿಟ್ಟು ಉತ್ತರಿಸುವರೆ :—

ಅ) ಸವದತ್ತಿ ನಗರದಲ್ಲಿ ಮುನಿಸಿಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯದ ಕಟ್ಟಡಕ್ಕೆ ೧೯೮೪ರಲ್ಲಿ ಶಂಕುಸ್ಥಾಪನೆ ಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಟ್ಟಡದ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು. ಹಾಗೂ ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಬಂದಿದೆ.

ಆ) ಕಟ್ಟಡ ಕೆಲಸಕ್ಕಾಗಿ ಟೆಂಡರ್ ಕರೆಯಲಾಗಿದೆ. ಆದಷ್ಟು ತೀವ್ರಗತಿಯಲ್ಲಿ ಇದನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಎಂ. ಚಂದ್ರಶೇಖರ ಮಾವಿನ.—ಮಾನ್ಯ ಮಂತ್ರಿಯವರಲ್ಲಿ ನಾನು ಕೇಳುವುದು ಏನೆಂದರೆ ಸವದತ್ತಿ ನಗರದ ಮುನ್ಸಿಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯದ ಕಟ್ಟಡಕ್ಕೆ ಒಂದು

ವರ್ಷದ ಒಂದೆ ಸಂಕುಸ್ಥಾಪನೆ ಆದಾಗ—ಮಾನ್ಯ ಕರ್ನಾಟಕ ರಾಜ್ಯದ ಹೈಕೋರ್ಟಿನ ಮುಖ್ಯ ನ್ಯಾಯಾಧಿ ಶರಾದ ಪಾಳಿಪಾತ್ ಸಾಹೆಬರವರು ಫಂಕ್ಷನ್‌ನಲ್ಲಿ ಹಾಜರಿದ್ದಾಗ, ಲೋಕೋಪ ಯೋಗಿ ಇಲಾಖೆಯ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರು ಒಂದು ವರ್ಷದೊಳಗಾಗಿ ಈ ಕೆಲಸ ವನ್ನು ಮುಗಿಸುತ್ತೇವೆ ಎಂದು ಹೇಳಿದ್ದರು. ಅದು ಇನ್ನೂ ಆಗಿಲ್ಲ. ಇಷ್ಟು ವಿಳಂಬವಾಗುವುದಕ್ಕೆ ಕಾರಣಗಳು ಏನು ಎಂದು ದಯಮಾಡಿ ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ಟೆಕ್ನಿಕಲ್ ಸ್ಯಾಕ್ಷನ್ ಆಗುವಲ್ಲಿ ಸ್ವಲ್ಪ ತಡವಾಗಿದೆ. ಆದಷ್ಟು ಬೇಗ ಮುಗಿಸುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಈ ವಿಷಯದಲ್ಲಿ ಮಾನ್ಯ ಸದಸ್ಯರು ಸಂತೋಷಪಡಬೇಕು. ಯಾಕೆಂದರೆ ೧೯೮೪ರಲ್ಲಿ ಆಸ್ತಿಭಾರ ಹಾಕಿರುವ ಕೋರ್ಟ್ ಕಟ್ಟಡಕ್ಕೆ ೧೯೮೫ ರಲ್ಲಿ ಕಟ್ಟಡ ತೆಗೆದುಕೊಳ್ಳಲಿಕ್ಕೆ ಆಯಿತು ಎಂದು ನನಗೆ ಸಂತೋಷವಾಗಿದೆ. ಕೆಲವು ಕಡೆ ಆಸ್ತಿಭಾರ ಹಾಕಿ ೫–೧೦ ವರ್ಷಗಳಾದರೂ ಕಟ್ಟಡ ಅಪೂರ್ಣವಾಗಿ ಇದ್ದಲ್ಲಿಯೇ ಇರುತ್ತದೆ. ಆದಷ್ಟು ಬೇಗ ಕೆಲಸವನ್ನು ಮುಗಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ ಪಾಟೀಲ.—ಈ ಕಟ್ಟಡ ಕಟ್ಟುವಂತಹ ಜಾಗದ ಭಾಗದಲ್ಲಿ ಶ್ರೀ ಚಿದಂಬರೇಶ್ವರ ದೇವಸ್ಥಾನ ಇದೆ. ಕಟ್ಟಡ ಕಟ್ಟುವಂತಹ ಜಾಗಕ್ಕಾಗಿ ವ್ಯಾಜ್ಯವೂ ಇದೆ ಎಂದು ಕಂಡುಬಂದಿದೆ. ಇದಕ್ಕಾಗಿ ವಿಳಂಬವಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ, ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ ಈ ಕಾರ್ಯಕ್ರಮ ವನ್ನು ಮುಂದುವರಿಸುತ್ತೇವೆ. ಟೆಂಡರ್ ಕರೆದಿದ್ದಾರೆ ಎಂಬ ಮಾತನ್ನು ಹೇಳುತ್ತೇನೆ.

ಮಾನ್ವಿ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜಿನ ಬಗ್ಗೆ

೨೫೪ (೭೦೫) ಶ್ರೀ ಬಸವರಾಜ ಪಾಟೀಲ್ ಅನ್ವರಿ (ಮಾನ್ವಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೆ :—

ಅ) ಮಾನ್ವಿ ನಗರದಲ್ಲಿ ಕುಡಿಯುವ ನೀರಿನ ತೊಂದರೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ತೊಂದರೆಯನ್ನು ನೀಗಲು ತುಂಗಭದ್ರಾ ನದಿಯಿಂದ ನೀರು ಸರಬರಾಜಿಗಾಗಿ ಯೋಜನೆಯನ್ನು ಏನಾದರೂ ಸರ್ಕಾರವು ಹಾಕಿಕೊಂಡಿದೆಯೇ ?

ಇ) ಹಾಗಿದ್ದಲ್ಲಿ ನೀರಿನ ಯೋಜನೆಯು ಈಗ ಯಾವ ಹಂತದಲ್ಲಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ್ ಪಾಟೀಲ್.—ಮಾನ್ಯ ಮಂತ್ರಿಗಳವರ ಉತ್ತರದಲ್ಲಿ ಏನು ಕಾಣುತ್ತದೆ ಅಂದರೆ ಒಂದು ಜಾಮೀನು ಪತ್ರ ಬರೆಸಿಕೊಳ್ಳುವ ಕಾಲದಲ್ಲಿ ಹಳ್ಳಿಯೊಳಗಿನ ಒಂದು ನೆನಪು ಬರುತ್ತದೆ. ಬರೆಸಿಕೊಳ್ಳುವಾಗ ''ಅವರು ಕೊಡದೇ ಹೋದರೆ ನಾನು ಕೊಡುತ್ತೇನೆಂದು ಬರೆದು ಕೊಟ್ಟು, ಓದುವಾಗ ''ಅವನು ಕೊಡದೇ ಹೋದರೆ ನಾನು ಏನು ಕೊಡುತ್ತೇನೆ'' ಎಂದು ಹೇಳಿ ಓದುತ್ತಿದ್ದರು. ಹಾಗಿದೆ ಇವರ ಉತ್ತರ. ಮಾನವಿ ನಗರದ್ದು ಕುಡಿಯುವ ನೀರಿನ ತೊಂದರೆ ಇದೆ ಎಂದು ಸರಕಾರದ ಗಮನಕ್ಕೆ ಬಂದಿದೆ ಎಂದು ಒಪ್ಪಿಕೊಳ್ಳುತ್ತಾರೆ. ಎರಡನೆಯದಕ್ಕೆ ಇಲ್ಲ ಎಂದು ಹೇಳುತ್ತಾರೆ. ಮೂರನೆಯದಕ್ಕೆ ಉದ್ಭವಿಸುವುದಿಲ್ಲ ಎಂದು ಹೇಳುತ್ತಾರೆ. ನಾನು ಹೇಳುವು ದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ನೀವು ಕುಡಿಯುವ ನೀರಿನ ಸಲುವಾಗಿ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಆದರೆ ನಗರದಲ್ಲಿ ಕುಡಿಯುವ ನೀರಿನ ಬಗ್ಗೆ ಯೋಜನೆಗಳು ಇಲ್ಲ ಎಂದರೆ ಹೇಗೆ ? ೧೯೭೧-೭೨ ರಲ್ಲಿ ತುಂಗಭದ್ರಾ ನದಿಯಿಂದ ಮಾನವಿ ತಾಲ್ಲೂಕಿಗೆ ಕುಡಿಯುವ